ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

16

ಲಾಖೆ / ವಿಷಯ : DEPARTMENT / SUBJECT: ಆರ್ಥಿಕ ಇಲಾಖೆ - ಶಾಸಕರ ಕ್ಷೇತ್ರಾಭಿವೃದ್ಧಿ

ತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 19/9/2020

## ಶಾಸಕರ ಕ್ಷೇತ್ರಾಭಿವೃದ್ಧಿ ಅನುದಾನ ಬಿಡುಗಡೆ

**ಬೆಂಗಳೂರು :** ಅಧಿವೇಶನದಲ್ಲಿ ಶಾಸಕರು ದನಿಯೆತ್ತುವ ಸುಳಿವು ಅರಿತಿರುವ ಸರಕಾರ 2020-21ನೇ ಸಾಲಿಗೆ ಸಂಬಂಧಿಸಿ ಶಾಸಕರ ಪ್ರದೇಶಾಭಿವೃದ್ಧಿ ನಿಧಿಗೆ 150.99 ಕೋಟಿ ರೂ. ಬಿಡುಗಡೆ ಮಾಡಿದೆ.

ಆರ್ಥಿಕ ಸಂಕಷ್ಟ ಇರುವುದರಿಂದ ಶಾಸಕರ ಪ್ರದೇಶಾಭಿವೃದ್ಧಿ ಅನುದಾನ ತಡೆಹಿಡಿಯಲಾಗಿತ್ತು. ಈ ವಿಚಾರದಲ್ಲಿ ಬಿಜೆಪಿ ಶಾಸಕರೇ ಅಸಮಾಧಾನಗೊಂಡಿದ್ದರು. ಈ ಬಗ್ಗೆ ಹಲವು ಬಾರಿ ಸಿಎಂ ಗಮನವನ್ನೂ ಸೆಳೆದಿದ್ದರು. ಪ್ರತಿಪಕ್ಷ ಕಾಂಗ್ರೆಸ್, ಜೆಡಿಎಸ್ ಶಾಸಕರೂ ಅತೃಪ್ತಿ ತೋಡಿಕೊಂಡಿದ್ದರು.

ಪ್ರತಿಪಕ್ಷಗಳು ಈ ಸಂಬಂಧ ಅಧಿವೇಶನದಲ್ಲಿ ಪ್ರಸ್ತಾಪಿಸಿ ಸರಕಾರವನ್ನು ಇಕ್ಕಟ್ಟಿಗೆ ಸಿಲುಕಿಸುವ ಲೆಕ್ಕಾಚಾರದಲ್ಲಿದ್ದವು. ಈ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ಅನುದಾನ ಬಿಡುಗಡೆ ಮಾಡಲಾಗಿದೆ. ಅದರಂತೆ 223 ಶಾಸಕರ ಕ್ಷೇತ್ರಗಳು ಹಾಗೂ ವಿಧಾನ ಪರಿಷತ್ ಸದಸ್ಯರಿಗೆ ಸಂಬಂಧಿಸಿ ಮೊದಲ ಕಂತಿನಡಿ ತಲಾ 50,33,330 ರೂ. ಲಭ್ಯವಾಗಲಿದೆ.